# ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001**

ಸಂಖ್ಯೆ:ಸಿ1(3) ಶಾ.ಸು/01/2019–20 ದಿನಾಂಕ : 02.11.2019

## –:ಸುತ್ತೋಲೆ:–

ವಿಷಯ: ಶಾಲಾ ವಾತಾವರಣವನ್ನು ಸುರಕ್ಷಿತವಾಗಿರುಸುವ ನಿಟ್ಟಿನಲ್ಲಿ ಭಾಗೀದಾರ ಇಲಾಖೆಗಳ ಶಾಲಾ ಸುರಕ್ಷತಾ ಸಮಿತಿ ರಚನೆ ಮತ್ತು ಮಾರ್ಗಸೂಚಿ ರಚಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 09.09.2019 ರಂದು ನಡೆದ ಸಭಾ ನಡವಳಿ

&&&&&

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 09.09.2019 ರಂದು ನಡೆದ ಶಾಲಾ ಸುರಕ್ಷತೆಗೆ ಮತ್ತು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ನಡಾವಳಿ ಅಂಗೀಕರಿಸಿ ಶಾಲಾ ವಾತಾವರಣವನ್ನು ಸುರಕ್ಷಿತವಾಗಿರಿಸುವ ನಿಟ್ಟಿನಲ್ಲಿ ಇರುವ ಉಪಕ್ರಮಗಳನ್ನು ಬಿಗಿಗೊಳಿಸುವ ಹಾಗೂ ಕಟ್ಟುನಿಟ್ಟಾಗಿ ಜಾರಿಗೊಳಿಸುವ ಸಂಬಂಧ ಈ ಕೆಳಕಂಡಂತೆ ಅಂಶಗಳನ್ನು ಕ್ರಮ ವಹಿಸಲು ತಿಳಿಸಲಾಗಿದೆ.

- ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗಧೀಕರಣ ಇತ್ಯಾದಿ ತಿದ್ದುಪಡಿ] ನಿಯಮಗಳು 2018ರಲ್ಲಿ ಪ್ರಸ್ತಾಪಿಸಿರುವಂತೆ ಶಾಲೆಗೆ ಸಂಬಂದಿಸಿದ ಎಲ್ಲಾ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವುದು.
- ಶಾಲಾ ಪ್ರದೇಶದಲ್ಲಿ ಕಾಡು ಪ್ರಾಣಿಗಳು ಹಾಗೂ ಸಾಕು ಪ್ರಾಣಿಗಳು ಪ್ರವೇಶ ಮಾಡದಂತೆ ಕ್ರಮವಹಿಸುವುದು.
- ಶಾಲಾ ಪ್ರದೇಶದ ಸುತ್ತಮುತ್ತ ಶಾಲಾ ಪ್ರಾರಂಭ ಮತ್ತು ಮುಕ್ತಾಯದ ಸಮಯದಲ್ಲಿ ವಾಹನಗಳ ವೇಗಮಿತಿ 20 ಕಿ.ಮಿ ಗಿಂತ ಹೆಚ್ಚಿರದಂತೆ ನಿಷೇದಿಸುವ ಸಲುವಾಗಿ ಸಂಬಂದಪಟ್ಟ ಸಕ್ಷಮ ಪೊಲೀಸ್ ಇಲಾಖೆಗೆ ತಿಳಿಸುವುದು.
- ಎಲ್ಲಾ ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಪ್ರತಿ ತರಗತಿ ಕೊಠಡಿಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲು ಸೂಕ್ತವಾದ ಕ್ರಮ ಕೈಗೊಳ್ಳುವುದು.
- ಶಾಲಾ ವಾಹನಗಳಿಗೆ ಒಬ್ಬ ಮಹಿಳಾ ರಕ್ಷಣಾ ಸಿಬ್ಬಂದಿ ನೇಮಿಸುವುದು.
- ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಸುರಕ್ಷತೆಯ ಬಗ್ಗೆ ತರಬೇತಿಗಳನ್ನು ನೀಡುವಂತೆ ಹಾಗೂ ಪೋಷಕರಿಗೂ ಸುರಕ್ಷತೆಯ ಬಗ್ಗೆ ತಿಳಿಸುವುದು.
- ಶಾಲೆಯ ಸುರಕ್ಷತೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಹಾಗೂ ಮಕ್ಕಳ ಮತ್ತು ಶಾಲೆಗಳ ಸಂರಕ್ಷಣೆಗಾಗಿ ಪೊಲೀಸ್ ಇಲಾಖೆಯ ಸಹಾಯವನ್ನು ಪಡೆದು ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಮಕ್ಕಳ ಮೇಲಿನ ದೌರ್ಜನ್ಯದ ಬಗ್ಗೆ ದೂರು ದಾಖಲಾದಾಗ ತೆಗೆದುಕೊಳ್ಳುವ ಕ್ರಮದ ಬಗ್ಗೆ ಮಕ್ಕಳಿಗಾಗಿ ಇರುವ ಎ.ಸಿ.ಎಂ ಸೆಷನ್ಸ್ ಕೋರ್ಟ್ [ಸಿ.ಸಿ.ಹೆಚ್] ಮಾಹಿತಿ ನೀಡುವುದು.
- ಶಿಕ್ಷಣ ಇಲಾಖೆಯ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರುಗಳು ನಿಗಧಿತ ಅವಧಿಯಲ್ಲಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಯ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ ಮಾಡಲು ಕಮಕೆಗೊಳುವದು.

- ಪೊಲೀಸ್ ಇಲಾಖೆ ಹಾಗೂ ಶಿಕ್ಷಣ ಇಲಾಖೆಗಳ ಸಮನ್ವಯ ಸಮಿತಿ ರಚಿಸಿ ಶಾಲೆಯ ಸುರಕ್ಷತೆ ಮತ್ತು ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಗಂಭೀರವಾಗಿ ಅನುಪಾಲಿಸಲು ಕ್ರಮವಹಿಸುವುದು.
- ಮಕ್ಕಳ ಸುರಕ್ಷತೆ ಕುರಿತಂತೆ ಒಂದು ಚೆಕ್ ಲಿಸ್ಟ್ ತಯಾರಿಸಿ ಶಾಲೆಗಳಿಂದ ವಿವರ ಪಡೆದು ಒಂದು ಡಾಟಬೇಸ್ ರಚಿಸಿ ಎಲ್ಲಾ ಶಾಲೆಗಳಿಗೆ ಒದಗಿಸಲು ಪೊಲೀಸ್ ಇಲಾಖೆಯ ವತಿಯಿಂದ ಕ್ರಮಕೈಗೊಳ್ಳುವುದು. ಹಾಗೂ ಈ ಕಾರ್ಯಕ್ರಮಕ್ಕೆ ಶಿಕ್ಷಣ ಇಲಾಖೆಯ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು ಸಹಾಯ ನೀಡುವುದು.
- ಮಕ್ಕಳ ಮೇಲೆ ದೌರ್ಜನ್ಯ ನಡೆದಾಗ ಶಾಲೆಯ ಕಡೆಯಿಂದ ಯಾವುದೇ ರೀತಿಯ ದೂರು ದಾಖಲಾಗದಿದ್ದರೂ ಪೊಲೀಸ್ ಇಲಾಖೆಯು ಸ್ವಯಂ ದೂರು ದಾಖಲಿಸಿ ಕ್ರಮಕೈಗೊಳ್ಳುವುದು.
- ಶಾಲಾ ಸುತ್ತಮುತ್ತಲಿನ ಪ್ರದೇಶದಲ್ಲಿ ಮಾದಕವಸ್ತುಗಳ ಮಾರಾಟವನ್ನು ನಿಷೇದಿಸಲು ಕ್ರಮ ಕೈಗೊಳ್ಳುವುದು. ಶಾಲೆಯ ಸುತ್ತಮುತ್ತ 100 ಮೀಟರ್ ಅಳತೆಯಲ್ಲಿ ತಂಬಾಕು ನಿಷೇದ ಮಾಡುವುದು. ಇದಕ್ಕೆ ಪ್ರತಿಯಾಗಿ ಈ ರೀತಿಯ ಮಕ್ಕಳ ಮೇಲಿನ ದೌರ್ಜನ್ಯ ನಡೆದಾಗ 1908 ರ ಸಂಖ್ಯೆಯನ್ನು ಡಯಲ್ ಮಾಡಿ ಪೊಲೀಸ್ ಇಲಾಖೆಗೆ ದೂರು ನೀಡುವ ಬಗ್ಗೆ ಮಕ್ಕಳಿಗೆ ಮತ್ತು ಪೋಷಕರಿಗೆ ವ್ಯಾಪಕ ಪ್ರಚಾರ ಮಾಡುವುದು.
- ಈಗಾಗಲೇ ಶಾಲೆಯಲ್ಲಿ ಒಬ್ಬ ಪೊಲೀಸ್ ಇಲಾಖೆಯ ಸಿಬ್ಬಂದಿಯನ್ನು ಒಳಗೊಂಡ ಆಂಟಿ ರ್‍ಯಾಗಿಂಗ್ ಕಮಿಟಿ ಹಾಗೂ ಕಾಲೇಜು ಸೇಫ್ಟಿ ಕಮಿಟಿಗಳು ಇರುವಂತೆ ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಪೊಲಿಸ್ ಇಲಾಖೆಯ ಸಿಬ್ಬಂದಿಯನ್ನು ಒಳಗೊಂಡು ಒಂದು ಸಮಿತಿಯನ್ನು ರಚಿಸುವಂತೆ ತಿಳಿಸುವುದು.
- ಶಾಲೆಗಳಲ್ಲಿ ಮಕ್ಕಳು ಸಮವಸ್ತ್ರವನ್ನು ಬದಲಾಯಿಸದಂತೆ ಕ್ರಮಕೈಗೊಳ್ಳುವುದು. ಶಾಲೆಯಲ್ಲಿ ಈಜುಕೊಳದಲ್ಲಿ ಪೋಟೋ ತೆಗೆಯುವುದನ್ನು ನಿಷೇದಿಸುವುದು. ಅಗತ್ಯವಿದ್ದಲ್ಲಿ ಛಾಯಾ ಚಿತ್ರವನ್ನು ತೆಗೆಯಲು ಒಬ್ಬ ಅಧಿಕೃತ ಛಾಯಾಚಿತ್ರಗಾರರನ್ನು ನೇಮಿಸುವುದು.
- ಮಕ್ಕಳಿಗೆ ರಸ್ತೆ ಸುರಕ್ಷತೆ, ರಾಸಾಯನಿಕ ಸುರಕ್ಷತೆ, ಅಗ್ನಿ ಸುರಕ್ಷತೆ, ತರಬೇತಿಯನ್ನು ನೀಡುವುದು. ಹಾಗೂ ಈಗಾಗಲೇ ತೆಗೆದುಕೊಂಡಿರುವ ಕ್ರಮದ ಬಗ್ಗೆ ತಿಳಿದುಕೊಳ್ಳುವುದು. ಮತ್ತು ಸಿ.ಸಿ.ಟಿವಿ ಅಳವಡಿಸಿ ಸಮರ್ಪಕ ನಿರ್ವಹಣೆ ಮಾಡುವುದು. ಶಾಲಾ ಸುರಕ್ಷತೆಯ ಬಗ್ಗೆ ಒಂದು ಮೊಬೈಲ್ ಆಪ್ ರಚಿಸಲು ಕ್ರಮಕೈಗೊಳ್ಳುವುದು.
- ಶಾಲಾ ಸುರಕ್ಷತೆ ಮತ್ತು ರಸ್ತೆ ಸುರಕ್ಷತೆಯ ಬಗ್ಗೆ ಪಠ್ಯ ಪುಸ್ತಕದಲ್ಲಿ ಒಂದು ವಿಷಯವನ್ನಾಗಿ ಸೇರಿಸಿ ತರಬೇತಿ ನೀಡುವಂತೆ ಕ್ರಮಕೈಗೊಳ್ಳುವುದು. ಮತ್ತು ಈಗಾಗಲೇ ಪ್ರತಿ ಶನಿವಾರದಂದು ಬ್ಯಾಗ್ ರಹಿತ ದಿನವನ್ನಾಗಿ ಘೋಷಣೆ ಮಾಡಿರುವಂತೆ ಪ್ರತಿ ಶನಿವಾರದಂದು ಒಂದು ಪ್ರಾತ್ಯಕ್ಷಿಕೆಯ ತರಗತಿಯನ್ನು ಏರ್ಪಡಿಸಿ ಮಕ್ಕಳಿಗೆ ತರಬೇತಿ ನೀಡಲು ಕ್ರಮಕೈಗೊಳ್ಳುವುದು.
- ಶಾಲಾ ಆಟದ ಮೈದಾನದಲ್ಲಿ ಹೈಟೆನ್‌ಷನ್ ಲೈನ್ ಹಾದುಹೋಗದಂತೆ ತಡೆಗಟ್ಟಲು ಕ್ರಮವಹಿಸುವುದು. ಹಾದುಹೋಗಿದ್ದಲ್ಲಿ ಸುರಕ್ಷಿತ ಕ್ರಮ ಅಳವಡಿಸತಕ್ಕದ್ದು.
- ಶಾಲೆಯಲ್ಲಿ ಕಡ್ಡಾಯವಾಗಿ ಅಗ್ನಿ ನಂದಕವನ್ನು ಅಳವಡಿಸತಕ್ಕದ್ದು, ಹಾಗೂ ಇದರ ಬಳಕೆಯ ಬಗ್ಗೆ ಮಕ್ಕಳಿಗೆ ತರಬೇತಿ ನೀಡುವುದು.
- ಪ್ರತಿ ಶಾಲೆಯು ಸಿಡಿಲು ನಿರೋಧಕ ಸಾಧನಗಳನ್ನು ಅಳವಡಿಸಲು ಕ್ರಮವಹಿಸುವುದು.
- ಪ್ರತಿ ಶಾಲೆಯು ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಗೆ ಪ್ರತ್ಯೇಕವಾಗಿ ಶೌಚಾಲಯಗಳನ್ನು ಹೊಂದಿರತಕ್ಕದ್ದು, ಹಾಗೂ ಅದರ ನೈರ್ಮಲ್ಯತೆಯನ್ನು ಕಾಪಾಡುವುದು.
- ಶಾಲೆಯ ಸುತ್ತಲು ಕಾಂಪೌಂಡ್ ಹೊಂದಿರತಕ್ಕದ್ದು.
- ಕಟ್ಟಡ ನಿರ್ಮಾಣಕ್ಕೆ ಸೂಕ್ತ ಪ್ರಾಧಿಕಾರದಿಂದ ನೀಲನಕ್ಷೆ ಪಡೆಯುವುದು ಹಾಗೂ ಅದರಂತೆಯೇ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಅಭಿಯಂತರರಿಂದ ದೃಢೀಕರಣ ಪಡೆಯುವುದು ಕಡ್ಡಾಯಗೊಳಿಸುವುದು.

- ಸರ್ಕಾರಿ ಹಾಗೂ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಕಟ್ಟಡ ಭದ್ರತೆಗಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಕಟ್ಟಡ ಸುರಕ್ಷತಾ ದೃಢೀಕರಣವನ್ನು ಪ್ರತೀ **ಎರಡು ವರ್ಷಕ್ಕೊಮ್ಮೆ** ಪಡೆಯುವುದನ್ನು ಕಡ್ಡಾಯಗೊಳಿಸುವುದು.

**ಮೇಲ್ಕಂಡ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸಲು ಕೆಳಕಂಡಂತೆ ಭಾಗೀದಾರ ಇಲಾಖಾ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ.**

| ಕ್ರ.ಸಂ | ಇಲಾಖಾ ಅಧಿಕಾರಿಗಳು ಹಾಗೂ ಹುದ್ದೆ | ಕಛೇರಿ ವಿಳಾಸ |
|---|---|---|
| 01 | ಸಹಾಯಕ ಪೋಲಿಸ್ ಆಯುಕ್ತರು, ಬೆಂಗಳೂರು ನಗರ | ಸಂಬಂಧಿಸಿದ ವ್ಯಾಪ್ತಿಯ |
| 02 | ಕ್ಷೇತ್ರ ಶಿಕ್ಷಣಾಧಿಕಾರಿಗಳು | ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 03 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಮಹಾನಗರ ಪಾಲಿಕೆ | ಸಂಬಂಧಿಸಿದ ವ್ಯಾಪ್ತಿಯ |
| 04 | ಪ್ರಾದೇಶಿಕ ಸಾರಿಗೆ ಇನ್ಸ್‌ಪೆಕ್ಟರ್, | ಆರ್.ಟಿ.ಓ ಕಛೇರಿ ಬೆಂಗಳೂರು (ಸಂಬಂಧಿಸಿದ ವ್ಯಾಪ್ತಿಯ) |
| 05 | ಕೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು | ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಎಲ್ಲಾ ವಲಯಗಳು |

(ಡಾ॥ ಕೆ.ಜಿ.ಜಗದೀಶ)
ಆಯುಕ್ತರು

ಪ್ರತಿಯನ್ನು :

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ.
02. ಆಯುಕ್ತರು, ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
03. ಪೋಲಿಸ್ ಆಯುಕ್ತರು, ಇನ್‌ಫಂಟ್ರಿ ರಸ್ತೆ, ಬೆಂಗಳೂರು ನಗರ ರವರಿಗೆ ಮಾಹಿತಿಗಾಗಿ.
04. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಶಾಂತಿ ನಗರ, ಬೆಂಗಳೂರು ರವರ ಮಾಹಿತಿಗಾಗಿ
05. ನಿರ್ದೇಶಕರು, ಪ್ರೌಢ ಮತ್ತು ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
06. ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
07. ಎಲ್ಲಾ ಕೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆ ಇವರಿಗೆ ಕ್ರಮಕ್ಕಾಗಿ.
08. ಆಯುಕ್ತರ ಆಪ್ತ ಶಾಖೆಗೆ
09. ಕಛೇರಿ ಪ್ರತಿ.